ಇವನ ಜೀವ ಅವನಾಗಿ ಹುಟ್ಟು, ಸಾವನ್ನು ಬಟ್ಟೆ ಬದಲಿಸಿಕೊಂಡಂತೆ ಒಂದಾಗಿದ್ದರು. ಇಬ್ಬರನ್ನೂ ಅಪ್ಪಿ ಹಿಡಿದು ಕೊನೆಯ ನೋಟದಲ್ಲಿ ಸೆಕ್ಯೂರಿಟಿ ಬೀಳ್ಕೊಟ್ಟ. ಆಸ್ಪತ್ರೆಯ ಹೊರಗೆ ಹೆಣವಿಟ್ಟುಕೊಂಡು ಈ ವೈದ್ಯರೇ ನನ್ನ ಮಗನ ಕೊಂದುಬಿಟ್ಟರು ಎಂದು ಬಡವಿ ತಾಯೊಬ್ಬಳು ರೋದಿಸುತ್ತಿದ್ದಳು. ಅಂಥಾದ್ದೆಲ್ಲ ದಿನ ಬೆಳಗಾದರೆ ಅದೆಷ್ಟೋ ಎಂದು ಜನ ಅವರವರ ಸುಖದುಃಖದಲ್ಲಿ ಕೊಚ್ಚಿ ಹೋಗುತ್ತಿದ್ದರು. ಯಾರನ್ನು ತಾನೇ ಹಳಿಯುವುದು... ಅವರಿಬ್ಬರಾಗಲೇ ಆ ಮಹಾನಗರವ ದಾಟಿದ್ದರು. 'ಅಣ್ಣಾ; ಸ್ವಲ್ಪ ನಿಲ್ಲಿಸಣ್ಣಾ' ಎಂದ. ಆ ಲಡಾಸು ಶವಬಂಡಿ ರೇಗುತ್ತಾ ನಿಂತಿತು. ಕುಂಟ ಕೆಳಗಿಳಿದು ರಸ್ತೆಯ ಬದಿಗೆ ಹೋಗಿ ತಾನು ಎಲ್ಲಿ ಆಕ್ಸಿಡೆಂಟಾಗಿ ಕಾಲು ಮುರಿದುಕೊಂಡು ಬಿದ್ದಿದ್ದನೋ ಆ ಜಾಗದಲ್ಲಿ ಮಂಡಿಯೂರಿ ಹೆದ್ದಾರಿಗೆ ಹಣೆ ಒತ್ತಿ ನಮಸ್ಕರಿಸಿದ. 'ಹೇ ಹುಚ್ಚಾ... ಆ ಜಾಗ ಸಾವು ಓಡಾಡೋ ನೆಲೆ; ಅದನ್ನ ಮುತ್ತಿಕ್ಕುವೆಯೆಲ್ಲಾ... ಮೃತ್ಯು ಚುಂಬನವೇ' ಎಂದು ಶವ ಸವಾರ ಕೇಳಿದ. 'ಹೌದಣ್ಣಾ... ಸಾವು ನನ್ನ ಕಾಲು ಕಿತ್ತುಕೊಂಡು ಇನ್ನಷ್ಟು ದಿನ ಇರು ಎಂದು ಬಿಟ್ಟು ಹೋಗಿದ್ದ ಪವಿತ್ರ ತಾಣ ಇದೇನೇ... ಅದಕ್ಕೇ ನಮಿಸಿದೆ' ಎಂದು ನಕ್ಕ. 'ಬಾ... ಬಾ... ಬಹಳ ದೂರ ದಾರಿ ಇದೆ... ಇಲ್ಲಿಗೇ ಎಲ್ಲ ಎಲ್ಲಿ ಮುಗಿಯುತ್ತದೆ; ಈಗ ತಾನೆ ಹೊರಟಿದ್ದೇವೆ' ಎಂದು ಗಾಡಿ ಚಾಲು ಮಾಡಿದ. ಆ ಶವಗಾಡಿ ಆಗಲೇ ಅವರಿಬ್ಬರನ್ನೂ ತಾನು ಎಲ್ಲಿಗೋ ಕರೆದೊಯ್ಯುತ್ತಿರುವೆ... ಅದರ ಪರಿವೆ ಈ ಕಮಂಗಿಗಳಿಗೆ ಗೊತ್ತಿಲ್ಲ ಎಂಬಂತೆ ಗಹಗಹಿಸಿ ನಗುವಂತೆ ಗಾಳಿ ಮಾರುತದಂತೆ ಓಡುತ್ತಿತ್ತು. ಅಕ್ಷರಶಃ ಅವರು ಕಾಲದ ಅಲೆಯಲ್ಲಿ ತೂರಿ ಹೋಗುತ್ತಿದ್ದರು.

'ಅಣ್ಣಾ... ನನ್ನೂರು ನಿನಗೆ ಗೊತ್ತೇನಣ್ಣಾ...'

'ಇರುವುದೊಂದೇ ಭೂಮಿಯಲ್ಲವೇ... ಅಲ್ಲಿ ಎಲ್ಲಿಯಾದರೂ ನಮ್ಮದೆನ್ನುವ ಒಂದು ಊರು ಇದ್ದೇ ಇರುತ್ತದೆ. ಆದಿ ಕಾಲದಲ್ಲಿ ಈ ಊರು ಕೇರಿ ವಿಳಾಸ ಗುರುತಿನ ಚೀಟಿಗಳೆಲ್ಲ ಎಲ್ಲಿದ್ದೋ... ಖಂಡಾಂತರಗಳನ್ನೆಲ್ಲಾ ನಡೆದುಕೊಂಡೇ ಹೋಗುತ್ತಿದ್ದ ಸತ್ತವರ ಮೂಳೆಗಳು ಮನುಷ್ಯರವೇ ತಾನೇ... ನೆಲೆ ನಿಲ್ಲಲು ಎಷ್ಟೊಂದು ರಕ್ತ ಚೆಲ್ಲಿದರೋ ಪೂರ್ವಿಕರು! ಸುಮ್ಮನೆ ಹೋಗ್ತಾ ಇರೋಣ. ನಿನ್ನ ಸಾವು ಎಲ್ಲಿ ಬರುತ್ತೋ ಅಲ್ಲಿ ನಿನ್ನನ್ನು ಮಣ್ಣು ಮಾಡಿ ಮುಂದೆ ಹೋಗುವೆ... ಸಿದ್ಧನಾಗಿರು... ಈ ಭೂಮಂಡಲವೇ ನಮ್ಮದು' ಎಂದ.

'ಅಷ್ಟೆಲ್ಲ ಹೆಂಗಾಯ್ತದಣ್ಣಾ... ಆಕಾಶಕ್ಕೆ ನಾನು ಹತ್ತಿರ ಇರಬಹುದು. ನಾನು ಗಗನಕ್ಕೆ ಸಮೀಪವೇ...'

'ಎಲ್ಲ ಸಾಧ್ಯವಿದೆ. ನಿನ್ನ ಕಣ್ಣು ಎಷ್ಟು ಚಿಕ್ಕವು... ಆದರೆ ಆಕಾಶವೇ ಕಣ್ಣಲ್ಲಿ ತುಳುಕಾಡುವುದಿಲ್ಲವೇ...'

'ಹೂಂ ಅಣ್ಣಾ.. ದೇವರು ಇಷ್ಟು ಪುಟ್ಟ ಕಣ್ಣ ಬಿಂಬದಲ್ಲಿ ಯಾಕಿದನೆಲ್ಲ ತೋರಿಸುವನು?'

'ನಮ್ಮ ಕುಬ್ಜತೆ ಎಷ್ಟಿದೆ ಎಂದು ತಿಳಿಸಲು ಹಾಗೆ ಮಾಡಿರಬಹುದು.' 'ಸಾವನ್ನು ದೇವರು ಕೊಟ್ಟನೋ ನಾವೇ ತಂದುಕೊಂಡೆವೊ...'

'ಈಗ ಸಾವಿನ ವಿಚಾರ ಬೇಡ... ಬಿರುಬಿಸಿಲಿಗೆ ಎಂಜಿನ್ ಬಿಸಿಯಾಗಿದೆ. ಅಲ್ಲೊಂದು ಮರದ ನೆರಳಲ್ಲಿ ನಿಲ್ಲಿಸಿ ವಿಶ್ರಾಂತಿ ಪಡೆಯುವ' ಎಂದ. ಅದೊಂದು ಛತ್ರಿಯಂತೆ ಚಾಚಿಕೊಂಡಿದ್ದ ಜಾಲಿ ಜಾತಿಯ ಮರ. ಗೀಜುಗನ ಹಕ್ಕಿಗಳು ಸಾಮೂಹಿಕವಾಗಿ ಗೂಡು ಕಟ್ಟಿಕೊಂಡಿದ್ದವು. ಅಲ್ಲೇ ಒಲೆ ಹೂಡಿ ಕಾಳು ಬೇಯಿಸಿ, ಆರಿಸಿ ಗೆಣಸು ತಿಂದರು. ಶವಬಂಡಿ ತಂಗಾಳಿಯ ಕುಡಿಯುತ್ತಿತ್ತು. ಬರಬಾರದ ದಾರಿಯಲ್ಲಿ ಇವರಾರೋ ದಾರಿ ತಪ್ಪಿ ಬಂದಿರುವವರು ಎಂದು ಶವ ಬಂಡಿಯ ಮೇಲೆ ಕೂತು ಹಕ್ಕಿಗಳು ಮಾತನಾಡಿಕೊಳ್ಳುತ್ತಿದ್ದವು.

'ಅಣ್ಣಾ... ನಾವೀಗ ಹೊರಟಿದ್ದೇವೆ... ಎಲ್ಲಿಗೆ ಎಂಬುದೇ ಗೊತ್ತಿಲ್ಲ. ಗುರಿಯೇ ಇಲ್ಲ. ಮುಂದಿನ ದಾರಿಯಲ್ಲಿ ಏನೇನಿದೆಯೋ...'

'ಇದೇ ಇದೇ ಅಲ್ಲೊಂದು ಖರ್ಜೂರದ ತೋಟವಿದೆ. ಅಲ್ಲಿ ಚೆಂದವತಿಯರು ಚೆಲುಮೆಯಲ್ಲಿ ಚಿಲುಮೆಯಾಗಿದ್ದಾರೆ. ಅವರ ಜೊತೆ ಇರುವೆಯಾ...'

'ಅಣ್ಣಾ... ನನ್ನ ಯೋಗ್ಯತೆಗೆ ಒಂದು ಕ್ಷುದ್ರ ಸಾವು ಬಂದು ಕಪಾಳಕ್ಕೆ ಬಡಿದುರುಳಿಸಿದರೆ ಸಾಕಾಗಿದೆ... ಹೆಣ್ಣು ಮಹಾ ಶಕ್ತಿ... ಅದು ನನ್ನಾಚೆನದು. ಬೇಕಾದರೆ ನೀನೇ ಚೆಲುವೆಯರ ಸರಸ ಸವಾರ ಆಗು. ನಾನು ಸೇವಕ ಆಗುವೆ'.

'ನನಗ್ಯಾಕೊ ಅವರೆಲ್ಲ... ಸಾವೇ ನನ್ನ ಪ್ರಿಯ

ದೇವತೆ. ಅವಳೇ ನನ್ನ ಪ್ರೇಯಸಿ. ಅವಳಿರುವಾಗ ಈ ದೈಹಿಕ ಚಪಲದ ಹೆಣ್ಣುಗಳ ಕಟ್ಟಿಕೊಂಡು